# ಕರ್ನಾಟಕ ಸರ್ಕಾರದ ನಡವಳಿ

**ವಿಷಯ:** ಶ್ರೀಮತಿ ರೇಖಾ ಕೋಂ ಜಿ.ಬಿ. ಸುರೇಶ್ ಮತ್ತು ಶ್ರೀಮತಿ ಅಕ್ಕಸಾಲಿಗರ ಮಧುಮತಿ ಕೋಂ ವಿಜಯ ಗ್ರಾಮ ಪಂಚಾಯತಿ ಸದಸ್ಯರು, ಬನ್ನಿಕೋಡು ಗ್ರಾಮ ಪಂಚಾಯತಿ, ಹರಿಹರ ತಾಲ್ಲೂಕು, ದಾವಣಗೆರೆ ಜಿಲ್ಲೆ ಇವರ ವಿರುದ್ಧ ಕರ್ನಾಟಕ ಗ್ರಾಮ ಸ್ವರಾಜ್ ಮತ್ತು ಪಂಚಾಯತ್ ರಾಜ್ ಅಧಿನಿಯಮ 1993ರ ಪ್ರಕರಣ 43(ಎ) ರಡಿ ಕ್ರಮ ಜರುಗಿಸುವ ಕುರಿತು.

**ಓದಲಾಗಿದೆ:**

1. ಸರ್ಕಾರದ ಆದೇಶ ಸಂಖ್ಯೆ: ಗ್ರಾಅಪ 1135 ಗ್ರಾಪಂಅ 2018 ದಿನಾಂಕ:02.02.2019.
2. ಮುಖ್ಯ ಕಾರ್ಯನಿರ್ವಾಹಕ ಅಧಿಕಾರಿ, ಜಿಲ್ಲಾ ಪಂಚಾಯಿತಿ ದಾವಣಗೆರೆ ಜಿಲ್ಲೆ ಇವರ ಪತ್ರ ಸಂಖ್ಯೆ:ಜಿಪಂ:ದಾ:ಆ(2):ಗ್ರಾ.ಪಂ/ಸಿಆರ್/110/2017-19 ದಿನಾಂಕ:24.05.2018.
3. ಪ್ರಾದೇಶಿಕ ಆಯುಕ್ತರು, ಬೆಂಗಳೂರು ವಿಭಾಗ ಬೆಂಗಳೂರು, ಇವರ ಪತ್ರ ಹಾಗೂ ವಿಚಾರಣಾ ವರದಿ ಸಂಖ್ಯೆ:ಪ್ರಾಆಕ/ಅಭಿವೃದ್ಧಿ/ಸಿಆರ್/09/2019-20, ದಿನಾಂಕ:20.11.2019.

**ಪ್ರಸ್ತಾವನೆ:**

ಮೇಲೆ ಓದಲಾದ ಕ್ರಮಾಂಕ (1)ರ ಸರ್ಕಾರಿ ಆದೇಶದಲ್ಲಿ ಕರ್ನಾಟಕ ಗ್ರಾಮ ಸ್ವರಾಜ್ ಮತ್ತು ಪಂಚಾಯತ್ ರಾಜ್ ಅಧಿನಿಯಮ, 1993 ರ ಪ್ರಕರಣ 43(ಎ) ರಡಿ ಗ್ರಾಮ ಪಂಚಾಯಿತಿ ಸದಸ್ಯರುಗಳು, ಪ್ರಕರಣ 48(4) ಮತ್ತು 48(5) ರಡಿ ಅಧ್ಯಕ್ಷರು ಹಾಗೂ ಉಪಾಧ್ಯಕ್ಷರುಗಳ ಮೇಲೆ ದುರ್ವರ್ತನೆ, ಅಧಿಕಾರ ಮತ್ತು ಹಣ ದುರುಪಯೋಗಕ್ಕಾಗಿ ಕ್ರಮಕೈಗೊಳ್ಳುವ ಸಲುವಾಗಿ ವಿಚಾರಣೆ ನಡೆಸುವ ಅಧಿಕಾರವನ್ನು ಪ್ರಾದೇಶಿಕ ಆಯುಕ್ತರುಗಳಿಗೆ ವಹಿಸಲಾಗಿದೆ.

ಅದರಂತೆ, ಮೇಲೆ ಓದಲಾದ ಕ್ರಮಾಂಕ (2)ರ ಪತ್ರದಲ್ಲಿ ಮುಖ್ಯ ಕಾರ್ಯನಿರ್ವಾಹಕ ಅಧಿಕಾರಿ, ಜಿಲ್ಲಾ ಪಂಚಾಯಿತಿ ದಾವಣಗೆರೆ ಜಿಲ್ಲೆ ಇವರು ಬನ್ನಿಕೋಡು ಗ್ರಾಮ ಪಂಚಾಯತಿ ವ್ಯಾಪ್ತಿಯಲ್ಲಿ 2017-18ನೇ ಸಾಲಿನ ಸ್ವಚ್ಛ ಭಾರತ ಮಿಷನ್ ಯೋಜನೆಯಡಿ ಬನ್ನಿಕೋಡು ಗ್ರಾಮ ಪಂಚಾಯತಿಯ ಶ್ರೀಮತಿ ರೇಖಾ ಕೋಂ ಜಿ.ಬಿ. ಸುರೇಶ್ ಮತ್ತು ಶ್ರೀಮತಿ ಅಕ್ಕಸಾಲಿಗರ ಮಧುಮತಿ ಕೋಂ ವಿಜಯ, ಸದಸ್ಯರು ಅವರ ಕುಟುಂಬದ ಸದಸ್ಯರಿಗೆ ಒಂದೇ ಶೌಚಾಲಯಕ್ಕೆ ಒಂದಕ್ಕಿಂತ ಹೆಚ್ಚು ಬಾರಿ ಒಂದು ಶೌಚಾಲಯಕ್ಕೆ ರೂ.12,000-00ಗಳಂತೆ ಒಟ್ಟು ರೂ.60,000-00ಗಳ ಸರ್ಕಾರದ ಹಣ ದುರುಪಯೋಗಪಡಿಸಿಕೊಂಡಿದ್ದು ಇವರು ಪರೋಕ್ಷವಾಗಿ ಸಹಕರಿಸಿರುವುದರಿಂದ ಸ್ವಚ್ಛ ಭಾರತ್ ಮಿಷನ್ ಯೋಜನೆಯಡಿ ನಿರ್ಮಿಸಿರುವ ಶೌಚಾಲಯಗಳ ಹಣ ಪಾವತಿಯಲ್ಲಿ ನಡೆದಿದೆ ಎನ್ನಲಾದ ಅವ್ಯವಹಾರದ ಬಗ್ಗೆ ಸ್ಥಳ ಪರಿಶೀಲನೆ ನಡೆಸಿ ವರದಿ ಸಲ್ಲಿಸುವಂತೆ ಮುಖ್ಯ ಕಾರ್ಯನಿರ್ವಾಹಕ ಅಧಿಕಾರಿ, ದಾವಣಗೆರೆ ಜಿಲ್ಲಾ ಪಂಚಾಯತ್‌ರವರು ಮುಖ್ಯ ಲೆಕ್ಕಾಧಿಕಾರಿಗಳಿಗೆ ನೀಡಿದ ನಿರ್ದೇಶನದಂತೆ ಮುಖ್ಯ ಲೆಕ್ಕಾಧಿಕಾರಿಗಳು ಸ್ಥಳ ಪರಿಶೀಲನೆ ನಡೆಸಿ ದಿನಾಂಕ:18.01.2018ರಂದು ವರದಿ ನೀಡಿರುವ ಹಿನ್ನೆಲೆಯಲ್ಲಿ ಈ ಕೆಳಕಂಡಂತೆ ವರದಿ ನೀಡಿರುತ್ತಾರೆ.

| ಕ್ರ ಸಂ | ಅರ್ಜಿ ಸಂಖ್ಯೆ | ಫಲಾನುಭವಿಯ ಹೆಸರು | ತಂದೆ/ ಗಂಡನ ಹೆಸರು | ಪಾವತಿಸಿದ ಮೊತ್ತ | ದಿನಾಂಕ | ಷರಾ |
|---|---|---|---|---|---|---|
| 1 | 2529287 | ಜಿ.ಬಿ.ಸುರೇಶ, ಗ್ರಾ.ಪಂ.ಸದಸ್ಯರು | ಬಸಪ್ಪ | 12000.00 | 04.05.16 | ಸದರಿ ಮನೆಗೆ 02 ಶೌಚಾಲಯಗಳಿದ್ದು, 02 ಶೌಚಾಲಯಗಳಲ್ಲಿ 1 ಹಳೆಯ ಶೌಚಾಲಯ ಹಾಗೂ 1 ಹೊಸದಾಗಿ ನಿರ್ಮಾಣ ಮಾಡಿರುವ ಶೌಚಾಲಯವಿರುತ್ತದೆ. ಹಳೇ ಶೌಚಾಲಯ ಸೇರಿ ಒಬ್ಬರ ಹೆಸರಿಗೆ 2 ಶೌಚಾಲಯದ ಹಣ ಪಾವತಿಯಾಗಿದೆ. |
| 2 | 3589593 | ಜಿ.ಬಿ.ಸುರೇಶ ಗ್ರಾ.ಪಂ.ಸದಸ್ಯರು | ಬಸಪ್ಪ | 12000.00 | 04.05.16 | |
| 3 | 2347947 | ಅಕ್ಕಸಾಲಿಗರ ಮಧುಮತಿ ಗ್ರಾ.ಪಂ.ಸದಸ್ಯರು | ವಿಜಯ | 12000.00 | 16.03.16 | ಒಂದೇ ಕುಟುಂಬದ ಗಂಡ, ಹೆಂಡತಿ ಮತ್ತು ಮಗನ ಹೆಸರಿಗೆ ಪ್ರತ್ಯೇಕ 03 ಶೌಚಾಲಯದ ಬಾಬ್ತು ಪಾವತಿಯಾಗಿದೆ. ಮನೆಯಲ್ಲಿ 3 ಶೌಚಾಲಯಗಳಿದ್ದು 02 ಹಳೆಯ ಶೌಚಾಲಯಗಳಿರುತ್ತದೆ. 1 ಹೊಸ ಶೌಚಾಲಯ ನಿರ್ಮಿಸಿಕೊಂಡಿರುತ್ತಾರೆ. |
| 4 | 2814694 | ಎ.ವಿ.ಶ್ರೀನಿವಾಸಚಾರಿ | ವಿಜಯ | 12000.00 | 24.08.16 | |
| 5 | 3706352 | ವಿಜಯ | ಕಾಶಿಚಾರಿ | 12000.00 | 03.10.17 | |

ಮೇಲೆ ಓದಲಾದ ಕ್ರಮಾಂಕ (4)ರ ಪ್ರಸ್ತಾವನೆಯಲ್ಲಿ ಪ್ರಾದೇಶಿಕ ಆಯುಕ್ತರು, ಬೆಂಗಳೂರು ವಿಭಾಗ ಬೆಂಗಳೂರು, ಇವರು ಶ್ರೀಮತಿ ಅಕ್ಕಸಾಲಿಗರ ಮಧುಮತಿ ಕೋಂ ವಿಜಯ, ಸದಸ್ಯರು ಹಾಗೂ ಶ್ರೀಮತಿ ರೇಖಾ ಕೋಂ ಜಿ. ಬಿ. ಸುರೇಶ, ಸದಸ್ಯರು ಬನ್ನಿಕೋಡು ಗ್ರಾಮ ಪಂಚಾಯತಿ, ಹರಿಹರ ತಾಲ್ಲೂಕು, ದಾವಣಗೆರೆ ಜಿಲ್ಲೆ ರವರ ಮೇಲಿರುವ ದೂರಿನ ಬಗ್ಗೆ ಸದರಿರವರಿಗೆ ನೋಟೀಸ್ ನೀಡಿ ದಿನಾಂಕ.24.06.2019 ಹಾಗೂ 13.09.2019ರಂದು ವಿಚಾರಣೆ ಮಾಡಿ ಲಿಖಿತ ಹೇಳಿಕೆ ಪಡೆಯಲಾಗಿರುತ್ತದೆ. ಶ್ರೀಮತಿ ಅಕ್ಕಸಾಲಿಗರ ಮಧುಮತಿರವರು ಒಂದೇ ಶೌಚಾಲಯಕ್ಕೆ ಮೂರು ಬಾರಿ, ಶ್ರೀಮತಿ ರೇಖಾ ಕೋಂ ಜಿ. ಬಿ. ಸುರೇಶರವರು ಒಂದೇ ಶೌಚಾಲಯಕ್ಕೆ ಎರಡು ಬಾರಿ ಹಣ ಪಡೆದು ಸರ್ಕಾರದ ಹಣ ದುರುಪಯೋಗಕ್ಕೆ ಕಾಣರಾಗಿರುತ್ತಾರೆ. ಶ್ರೀಮತಿ ಅಕ್ಕಸಾಲಿಗರ ಮಧುಮತಿ ರವರು ರೂ.12,000/-ಗಳ

ಎರಡು ಚಲನ್ ಶ್ರೀಮತಿ ರೇಖಾ ಕೋಂ ಜಿ. ಬಿ. ಸುರೇಶರವರು ರೂ.12,000/-ಗಳನ್ನು ಸರ್ಕಾರಕ್ಕೆ ವಾಪಸ್ಸು ಕಟ್ಟಿರುವ ಚಲನ್‌ನ ಜೆರಾಕ್ಸ್‌ನ ಪ್ರತಿ ಸಲ್ಲಿಸಿರುತ್ತಾರೆ. ಸದರಿರವರು ಸರ್ಕಾರದ ಹಣ ದುರುಪಯೋಗಪಡಿಸಿಕೊಂಡು ಅವ್ಯವಹಾರ ಮತ್ತು ಕರ್ತವ್ಯಲೋಪ ಮಾಡಿರುವುದರಿಂದ ಗ್ರಾಮ ಪಂಚಾಯಿತಿ ಸದಸ್ಯರು ಸಮರ್ಪಕವಾಗಿ, ಜವಾಬ್ದಾರಿಯುತವಾಗಿ ಹಾಗೂ ಪಾರದರ್ಶಕವಾಗಿ ತಮ್ಮ ಕರ್ತವ್ಯಗಳನ್ನು ನಿಭಾಯಿಸದೆ ಇರುವುದು ಸಾಬೀತಾಗಿದೆ. ಆದ ಕಾರಣ ಶ್ರೀಮತಿ ಅಕ್ಕಸಾಲಿಗರ ಮಧುಮತಿ ಕೋಂ ವಿಜಯ, ಸದಸ್ಯರು ಹಾಗೂ ಶ್ರೀಮತಿ ರೇಖಾ ಕೋಂ ಜಿ. ಬಿ. ಸುರೇಶ, ಸದಸ್ಯರು ಬನ್ನಿಕೋಡು ಗ್ರಾಮ ಪಂಚಾಯತಿ, ಹರಿಹರ ತಾಲ್ಲೂಕು, ದಾವಣಗೆರೆ ಜಿಲ್ಲೆ ರವರ ವಿರುದ್ಧ ಕರ್ನಾಟಕ ಪಂಚಾಯತ್ ರಾಜ್ ಅಧಿನಿಯಮ 1993ರ ಪ್ರಕರಣ 43(ಎ) 48(4)ರನ್ವಯ ಕ್ರಮ ಜರುಗಿಸಬಹುದಾಗಿರುತ್ತದೆ ಎಂದು ಸರ್ಕಾರಕ್ಕೆ ಶಿಫಾರಸ್ಸು ಮಾಡಿರುತ್ತಾರೆ.

ಈ ಪ್ರಕರಣದ ವಿಚಾರಣೆ ವರದಿ ಮತ್ತು ದಾಖಲೆಗಳನ್ನು ಪರಿಶೀಲಿಸಲಾಗಿ, ಶ್ರೀಮತಿ ಅಕ್ಕಸಾಲಿಗರ ಮಧುಮತಿ ಕೋಂ ವಿಜಯ, ಸದಸ್ಯರು ಹಾಗೂ ಶ್ರೀಮತಿ ರೇಖಾ ಕೋಂ ಜಿ. ಬಿ. ಸುರೇಶ, ಸದಸ್ಯರು ಬನ್ನಿಕೋಡು ಗ್ರಾಮ ಪಂಚಾಯತಿ, ಹರಿಹರ ತಾಲ್ಲೂಕು, ದಾವಣಗೆರೆ ಜಿಲ್ಲೆ ಇವರ ಆಪಾದನೆ ಸಾಬೀತಾಗಿರುವ ಹಿನ್ನೆಲೆಯಲ್ಲಿ ಸದರಿಯವರ ವಿರುದ್ಧ ಕರ್ನಾಟಕ ಪಂಚಾಯತ್ ರಾಜ್ ಅಧಿನಿಯಮ, 1993 ಪ್ರಕರಣದ 43(ಎ) ರನ್ವಯ ಸದಸ್ಯತ್ವದಿಂದ ತೆಗೆದು ಹಾಕಲು ಸರ್ಕಾರವು ನಿರ್ಣಯಿಸಿದೆ.

ಅದರಂತೆ ಈ ಕೆಳಕಂಡ ಆದೇಶ.

**ಸರ್ಕಾರದ ಆದೇಶ ಸಂಖ್ಯೆ: ಗ್ರಾಅಪ 1095 ಗ್ರಾಪಂಅ 2019 ಬೆಂಗಳೂರು, ದಿನಾಂಕ:13.01.2020**

ಪ್ರಸ್ತಾವನೆಯಲ್ಲಿ ವಿವರಿಸಿರುವ ಅಂಶಗಳ ಹಿನ್ನೆಲೆಯಲ್ಲಿ, ಶ್ರೀಮತಿ ಅಕ್ಕಸಾಲಿಗರ ಮಧುಮತಿ ರವರು ಒಂದೇ ಶೌಚಾಲಯಕ್ಕೆ ಮೂರು ಬಾರಿ, ಶ್ರೀಮತಿ ರೇಖಾ ಕೋಂ ಜಿ. ಬಿ. ಸುರೇಶ ರವರು ಒಂದೇ ಶೌಚಾಲಯಕ್ಕೆ ಎರಡು ಬಾರಿ ಹಣ ಪಡೆದು ಸರ್ಕಾರದ ಹಣ ದುರುಪಯೋಗಕ್ಕೆ ಕಾಣರಾಗಿರುತ್ತಾರೆ ಹಾಗೂ ರೂ.12,000/-ಗಳ ಎರಡು ಚಲನ್ ಮತ್ತು ಶ್ರೀಮತಿ ರೇಖಾ ಕೋಂ ಜಿ. ಬಿ. ಸುರೇಶರವರು ರೂ.12,000/-ಗಳನ್ನು ಸರ್ಕಾರಕ್ಕೆ ವಾಪಸ್ಸು ಕಟ್ಟಿರುವ ಜೆರಾಕ್ಸ್ ಪ್ರತಿ ಸಲ್ಲಿಸಿರುತ್ತಾರೆ. ಆದರೆ, ಸದರಿರವರು ಸರ್ಕಾರದ ಹಣ ದುರುಪಯೋಗಪಡಿಸಿಕೊಂಡು ಅವ್ಯವಹಾರ ಮತ್ತು ಕರ್ತವ್ಯಲೋಪ ಮಾಡಿರುವುದರಿಂದ ಹಾಗೂ ಗ್ರಾಮ ಪಂಚಾಯಿತಿ ಸದಸ್ಯರು ಸಮರ್ಪಕವಾಗಿ ಜವಾಬ್ದಾರಿಯುತವಾಗಿ ಹಾಗೂ ಪಾರದರ್ಶಕವಾಗಿ ತಮ್ಮ ಕರ್ತವ್ಯಗಳನ್ನು ನಿಭಾಯಿಸದೆ ಇರುವುದು ಸಾಬೀತಾಗಿದೆ. ಆದುದರಿಂದ ಶ್ರೀಮತಿ ಅಕ್ಕಸಾಲಿಗರ ಮಧುಮತಿ ಕೋಂ ವಿಜಯ, ಸದಸ್ಯರು ಹಾಗೂ ಶ್ರೀಮತಿ ರೇಖಾ ಕೋಂ ಜಿ. ಬಿ. ಸುರೇಶ, ಸದಸ್ಯರು ಬನ್ನಿಕೋಡು ಗ್ರಾಮ ಪಂಚಾಯತಿ, ಹರಿಹರ ತಾಲ್ಲೂಕು, ದಾವಣಗೆರೆ ಜಿಲ್ಲೆ ಇವರನ್ನು ಕರ್ನಾಟಕ ಗ್ರಾಮ ಸ್ವರಾಜ್ ಮತ್ತು ಪಂಚಾಯತ್ ರಾಜ್ ಅಧಿನಿಯಮ, 1993ರ ಪ್ರಕರಣದ 43(ಎ) ರನ್ವಯ ಬನ್ನಿಕೋಡು ಗ್ರಾಮ ಪಂಚಾಯತಿಯ ಸದಸ್ಯತ್ವ ಸ್ಥಾನದಿಂದ ತಕ್ಷಣದಿಂದ ಜಾರಿಗೆ ಬರುವಂತೆ ತೆಗೆದು ಹಾಕಿ ಆದೇಶಿಸಿದೆ.

ಕರ್ನಾಟಕ ರಾಜ್ಯಪಾಲರ ಆದೇಶಾನುಸಾರ
ಮತ್ತು ಅವರ ಹೆಸರಿನಲ್ಲಿ

(ರಮೇಶ್ ಡಿ.ಪಿ)
ಉಪನಿರ್ದೇಶಕರು ಹಾಗೂ ಪದನಿಮಿತ್ತ
ಸರ್ಕಾರದ ಅಧೀನ ಕಾರ್ಯದರ್ಶಿ,(ಗ್ರಾ.ಪಂ)(ಪ್ರ)
ಗ್ರಾಮೀಣಾಭಿವೃದ್ಧಿ ಮತ್ತು ಪಂಚಾಯತ್ ರಾಜ್ ಇಲಾಖೆ.

<u>ಪ್ರತಿ:</u>

1) ಪ್ರಾದೇಶಿಕ ಆಯುಕ್ತರು, ಬೆಂಗಳೂರು ವಿಭಾಗ ಬೆಂಗಳೂರು, 2ನೇ ಮಹಡಿ, ಬಿ.ಎಂ.ಟಿ.ಸಿ. ಕಟ್ಟಡ, ಶಾಂತಿನಗರ, ಕೆ.ಹಚ್. ರಸ್ತೆ, ಬೆಂಗಳೂರು.

2) ಜಿಲ್ಲಾಧಿಕಾರಿಗಳು, ದಾವಣಗೆರೆ ಜಿಲ್ಲೆ.
3) ಮುಖ್ಯ ಕಾರ್ಯನಿರ್ವಾಹಕ ಅಧಿಕಾರಿ, ಜಿಲ್ಲಾ ಪಂಚಾಯತಿ ದಾವಣಗೆರೆ ಜಿಲ್ಲೆ.
4) ಕಾರ್ಯನಿರ್ವಾಹಕ ಅಧಿಕಾರಿ, ತಾಲ್ಲೂಕು ಪಂಚಾಯತಿ ಹರಿಹರ ತಾಲ್ಲೂಕು, ದಾವಣಗೆರೆ ಜಿಲ್ಲೆ.
5) ಪಂಚಾಯತಿ ಅಭಿವೃದ್ಧಿ ಅಧಿಕಾರಿ, ಬನ್ನಿಕೋಡು ಗ್ರಾಮ ಪಂಚಾಯತಿ, ಹರಿಹರ ತಾಲ್ಲೂಕು, ದಾವಣಗೆರೆ ಜಿಲ್ಲೆ.
6) ಶ್ರೀಮತಿ ಅಕ್ಕಸಾಲಿಗರ ಮಧುಮತಿ ಕೋಂ ವಿಜಯ, ಸದಸ್ಯರು ಹಾಗೂ ಶ್ರೀಮತಿ ರೇಖಾ ಕೋಂ ಜಿ. ಬಿ. ಸುರೇಶ, ಸದಸ್ಯರು ಬನ್ನಿಕೋಡು ಹರಿಹರ ತಾಲ್ಲೂಕು, ದಾವಣಗೆರೆ ಜಿಲ್ಲೆ

**ಪ್ರತಿಯನ್ನು ಮಾಹಿತಿಗಾಗಿ:**

1) ಮಾನ್ಯ ಗ್ರಾಮೀಣಾಭಿವೃದ್ಧಿ ಮತ್ತು ಪಂಚಾಯತ್ ರಾಜ್ ಸಚಿವರ ಆಪ್ತ ಕಾರ್ಯದರ್ಶಿಗಳು, ವಿಧಾನ ಸೌಧ, ಬೆಂಗಳೂರು.
2) ಸರ್ಕಾರದ ಮಾನ್ಯ ಕಾರ್ಯದರ್ಶಿಗಳು(ಪಂ.ರಾಜ್), ಗ್ರಾಮೀಣಾಭಿವೃದ್ಧಿ ಮತ್ತು ಪಂಚಾಯತ್ ರಾಜ್ ಇಲಾಖೆ ಇವರ ಆಪ್ತ ಕಾರ್ಯದರ್ಶಿ.
3) ಕಛೇರಿ ಪ್ರತಿ/ಹೆಚ್ಚುವರಿ ಪ್ರತಿ.
4) ಗಣಕ ಕೋಶ.